सरयू ॐ
# ಸರಯೂ
ವಿದ್ಯಾಕೇಂದ್ರ ವಾರ್ತಾಪತ್ರ

SARAYU - Kannada Monthly Regn. No. KARKAN/2014/62363
june Vol. : 4 Issue : 3 5119/ಹೇಮಲಂಬಿ ಸಂವತ್ಸರ ಆಗೋಸ್ಟ್ 2017 ಪುಟ 8 Rs. 10/-
Postal Regn No. PTR/135/2016-18
Licensed to Post without pre-payment
License No: SK/WPP/PTR/177/2016-18



## ಶ್ರೀರಾಮ ವಿದ್ಯಾಕೇಂದ್ರದಲ್ಲಿ 2017–18 ನೇ ಸಾಲಿಗೆ ದಾಖಲಾದ ವಿದ್ಯಾರ್ಥಿಗಳ ವಿಭಾಗವಾರು ಸಂಖ್ಯೆ

ಒಟ್ಟು **3214**

| ಶಿಶುಮಂದಿರ | ಪ್ರಾಥಮಿಕ | ಪ್ರೌಢ | ಪದವಿ ಪೂರ್ವ | ಪದವಿ |
|---|---|---|---|---|
| 243 | 1064 | 902 | 645 | 360 |

ಸವಿವರ ಅಂಕಿ ಅಂಶಗಳು ಪುಟ 6ರಲ್ಲಿ....






ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳಿಗೆ 14.07.2017ರಂದು ಸುಧೆಕ್ಕಾರಿನ ಗದ್ದೆಯಲ್ಲಿ ಕೃಷಿ ಚಟುವಟಿಕೆ ತರಬೇತಿ. 120 ವಿದ್ಯಾರ್ಥಿಗಳು ಭಾಗವಹಿಸಿ, ಭತ್ತದನಾಟಿ ಮಾಡುವ ವಿಧಾನವನ್ನು ಕಲಿತರು. ಹಾಗೂ ಕೆಸರುಗದ್ದೆಯಲ್ಲಿ ಅತ್ಯಂತ ಉಲ್ಲಾಸ, ಉತ್ಸಾಹದಿಂದ ಭಾಗವಹಿಸಿ ಕೃಷಿ ತರಬೇತಿ ಪಡೆದರು.

ಪದವಿ ಪೂರ್ವ ವಿಭಾಗದ ಪರಿಸರ ಸಂಘದ ವತಿಯಿಂದ ಕಾಲೇಜು ಪರಿಸರದಲ್ಲಿ ಶ್ರಮದಾನ






ಪ್ರಾಥಮಿಕ ವಿಭಾಗದಲ್ಲಿ ಕಲಿಕೆಗೆ ಸಹಾಯಕವಾಗುವ ನಿಟ್ಟಿನಲ್ಲಿ ಆರಂಭಗೊಂಡ ಸ್ಮಾರ್ಟ್ ಬೋರ್ಡ್ ಕಲಿಕಾ ತರಗತಿಯನ್ನು ಶ್ರೀ ದಾಮೋದರ ಮಾರ್ಲ ರಾಷ್ಟ್ರೀಕೃತ ಬ್ಯಾಂಕಿನ ನಿವೃತ್ತ ಅಧಿಕಾರಿ(ಎಸ್.ಬಿ.ಐ) ಉದ್ಘಾಟಿಸಿದರು.

ಪ್ರಾಥಮಿಕ ಶಾಲೆಯ ಕೃಷಿ ಸಂಘದ ವತಿಯಿಂದ ನಾಟಿ ಕಾರ್ಯ ಮಾಡಲಾಯಿತು. ವಿದ್ಯಾ–ಕೇಂದ್ರದ ಸಂಚಾಲಕರು ವಸಂತ ಮಾಧವ, ಕೋಶಾಧಿಕಾರಿ ಶಿವಗಿರಿ ಸತೀಶ್ ಭಟ್, ವಿದ್ಯಾರ್ಥಿಗಳು, ಅಧ್ಯಾಪಕರ ಜೊತೆಗೆ ಸಮಿತಿ ಸದಸ್ಯರಾದ ಪಿ.ಕೆ.ಪದ್ಮನಾಭ, ಜಯರಾಮ ಸುಧೆಕ್ಕಾರ್, ಶ್ರೀಮತಿ ಸ್ವಾತಿ ಮುಂತಾದವರು ಕೃಷಿ ಕಾರ್ಯದಲ್ಲಿ ತೊಡಗಿಸಿಕೊಂಡರು.

# ಶಿಶುಮಂದಿರ



ಶ್ರೀರಾಮ ಶಿಶುಮಂದಿರದ ಶಿಕ್ಷಣದ ಬಗ್ಗೆ ಪಾಲಕರಿಗೆ ಕಾರ್ಯಾಗಾರ ನಡೆಸಲಾಯಿತು.



ಶ್ರೀಕೃಷ್ಣ ಶಿಶುಮಂದಿರ ಸಜಿಪದಲ್ಲಿ ಆಡಳಿತ ಮಂಡಳಿ ಸದಸ್ಯರಾಗಿದ್ದ ಶ್ರೀ ಶರತ್ ಮಡಿವಾಳ ಇವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಪಾಲಕರ ಸಭೆ ನಡೆಸಲಾಯಿತು.



ಸಜಿಪ ಶ್ರೀ ಕೃಷ್ಣ ಶಿಶುಮಂದಿರದಲ್ಲಿ ಆಷಾಢ ಹುಣ್ಣಿಮೆ ನಿಮಿತ್ತ ನಡೆದ ಗುರುಪೂಜೆ ಕಾರ್ಯಕ್ರಮ



ಶ್ರೀರಾಮ ಶಿಶುಮಂದಿರದ ಪಾಲಕರ ಸಭೆಯಲ್ಲಿ ಹಿರಿಯರಾದ ಡಾ. ಪ್ರಭಾಕರ ಭಟ್



ಶ್ರೀರಾಮ ಶಿಶುಮಂದಿರದ ಗುರುಪೂಜೆ ಆಚರಣೆ



ಹಿಂದು ಸೇವಾ ಪ್ರತಿಷ್ಠಾನ ಯೂತ್ ಫಾರ್ ಸೇವಾದ ವತಿಯಿಂದ ಬ್ಯಾಗ್ ಪುಸ್ತಕ ಲೇಖನ ಸಾಮಾಗ್ರಿಗಳನ್ನು ವಿತರಣೆ

# ಪ್ರಾಥಮಿಕ ಶಾಲೆ




ಜುಲೈ ತಿಂಗಳಿನಲ್ಲಿ ಹುಟ್ಟಿದ ವಿದ್ಯಾರ್ಥಿಗಳ ಸಾಮೂಹಿಕ ಹುಟ್ಟುಹಬ್ಬ ಮತ್ತು ಭಜನಾ ಕಾರ್ಯಕ್ರಮ



ವಿದ್ಯಾಭಾರತಿ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ವಿಜೇತರಾದ ಸ್ಪರ್ಧಿಗಳು




ಕಾರ್ಗಿಲ್ ಸಂಸ್ಮರಣಾ ದಿನಾಚರಣೆ–ನಿವೃತ್ತ ಸೈನಿಕರಾದ ಶ್ರೀ ಹರೀಶ್ ದೇವರಗುಂಡಿ, ದಿನೇಶ್ ನೆಟ್ಲ, ಹಾಲಿ ಸೈನಿಕ ಶ್ರೀ ಸಂತೋಷ್ ನೆಟ್ಲ ಇವರನ್ನು ಗೌರವಿಸಲಾಯಿತು.



ವಿದ್ಯಾರ್ಥಿಗಳ ಸಂಸತ್ತಿನ ರಚನೆ – ಅಭ್ಯರ್ಥಿಗಳ ಪ್ರಮಾಣವಚನ ಸ್ವೀಕಾರ



ವಿದ್ಯಾರ್ಥಿ ಸಂಘ ಹಾಗೂ ವಿವಿಧ ಸಂಘಗಳ ಉದ್ಘಾಟನೆ




ಗುರುಪೂಜೋತ್ಸವದಲ್ಲಿ ಶಿಶುಮಂದಿರ ವ್ಯವಸ್ಥಾಪಕಿ ಶ್ರೀಮತಿ ಸುಧಾ ಸೂರ್ಯಭಟ್

# ಪ್ರೌಢ ಶಾಲೆ



ವಿದ್ಯಾರ್ಥಿ ಸಂಘ ಹಾಗೂ ವಿವಿಧ ಸಂಘಗಳ ಉದ್ಘಾಟನೆ



ದೃಷ್ಟಿದೋಷ ತಪಾಸಣಾ ಶಿಬಿರದಲ್ಲಿ ಬಂಟ್ವಾಳದ ನೇತ್ರಾಧಿಕಾರಿ ಡಾ. ಶಾಂತರಾಜ್




ಕಾರ್ಗಿಲ್ ವಿಜಯ ದಿವಸ್ ಆಚರಣೆಯಲ್ಲಿ ಸನ್ಮಾನಿತರಾದ ಯೋಧ ಶ್ರೀ ಭಾಸ್ಕರ್ ಅಮ್ಮೂರು

## ಸುಭಾಷಿತ ಮಂಜರಿ

ಪ್ರಜ್ಞಯಾ ಮಾನಸಂ ದುಃಖಂ
ಹನ್ಯಾಚ್ಛಾರೀರಮೌಷಧೈಃ ।
ಏತದ್ವಿಜ್ಞಾನಸಾಮರ್ಥ್ಯಂ ನ
ಬಾಲೈಃ ಸಮತಾಮಿಯಾತ್ ॥

"ಮಾನಸಿಕವಾದ ದುಃಖವನ್ನು ವಿಚಾರ ಶಕ್ತಿಯಿಂದ ಹೋಗಲಾಡಿಸಿಕೊಳ್ಳಬೇಕು. ದೇಹಕ್ಕೆ ಬಂದ ಆಪತ್ತನ್ನು ಔಷಧಗಳಿಂದ ಗುಣಪಡಿಸಿಕೊಳ್ಳಬೇಕು. ಬುದ್ಧಿ ಸಾಮರ್ಥ್ಯವೆಂದರೆ ಇದುವೇ. ಇದನ್ನು ಬಿಟ್ಟು ಬಾಲಿಶರಂತೆ ವರ್ತಿಸಬಾರದು."

**ಆತ್ಮೀಯ ಓದುಗರೇ,**

**ಶ್ರಾವಣ ಬಂತು ನಾಡಿಗೆ... ಬಂತು ಬೀಡಿಗೆ... ರಕ್ಷಾ ಬಂಧನ, ಶ್ರೀಕೃಷ್ಣ ಜನ್ಮಾಷ್ಟಮಿ ಹಾಗೂ ವಿನಾಯಕ ಚತುರ್ಥಿಯ ಶುಭಾಶಯಗಳು.**

**ಜುಲೈ ತಿಂಗಳ ಕಾರ್ಯಕ್ರಮಗಳ ವರದಿಯೊಂದಿಗೆ ಆಗಸ್ಟ್ ತಿಂಗಳ ಸಂಚಿಕೆ ನಿಮ್ಮ ಕೈ ಸೇರಿದೆ. ಭರಪೂರ ಕಾರ್ಯಕ್ರಮಗಳ ವರದಿಯಾಗಿದೆ.**

**ಶಿಶುಮಂದಿರದಲ್ಲಿ ಹೊರತುಪಡಿಸಿ ಉಳಿದೆಲ್ಲಾ ವಿಭಾಗಗಳಲ್ಲಿ ಬಹುತೇಕ ದಾಖಲಾತಿಗಳು ಮುಕ್ತಾಯಗೊಂಡಿದ್ದು ಅದರ ಕ್ರೋಢೀಕೃತ ವರದಿ ಮುಖ ಪುಟದಲ್ಲಿ, ಸವಿವರವಾದ ವರದಿ ಪುಟ ಸಂಖ್ಯೆ 6 ರಲ್ಲಿದೆ. ಅಲ್ಲದೇ ವಿದ್ಯಾ ಸಂಸ್ಥೆಯ ಬೇರೆ ಬೇರೆ ವ್ಯವಸ್ಥೆಗಳ ಅಂಕಿ ಅಂಶಗಳು ವರದಿಯಾಗಿದೆ.**

**ವಂದನೆಗಳು**

**ಸಂಪಾದಕ ಬಳಗ**


## ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪೂರ್ಣಿಮಾ (ಶಿಶುಮಂದಿರ)
ರೂಪಕಲಾ (ಪ್ರಾಥಮಿಕ ಶಾಲೆ)
ಮನೋಜ್ (ಪ್ರೌಢಶಾಲೆ)
ಹರ್ಷಿತಾ (ಪಿ.ಯು.ಸಿ)
ಶೈಲಜಾ (ಪದವಿ)
ವಿನುತ ಎಸ್.ಎನ್. (ಮಕ್ಕಳ ಪುಟ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಮೂರು


# ಸಾಧನೆಯ ಬೀಗದಕೈ – ಮನಸ್ಸು

**ಚಿಂತನರಶ್ಮಿ**

ಭರ್ತೃಹರಿ ಬೃಹತ್ ಸಾಮ್ರಾಜ್ಯದ ಚಕ್ರವರ್ತಿಯಾಗಿದ್ದವನು. ತನ್ನ ಹೆಂಡತಿ ತನಗೆ ಮೋಸಮಾಡಿದ್ದಾಳೆಂಬ ಅರಿವಾದೊಡನೆ ಸಿಂಹಾಸನವನ್ನು ಬಿಟ್ಟು ವೈರಾಗಿಯಾದವನು. ಮುಂದೆ ಶತಕ ತ್ರಯಗಳನ್ನು ಬರೆದು ಪ್ರಖ್ಯಾತನಾದವನು.

ಮನೆಯನ್ನು ತೊರೆಯುವುದು ಸುಲಭ, ಅಧಿಕಾರವನ್ನು ತ್ಯಜಿಸುವುದು ಕಷ್ಟ, ಆದರೆ ಮನಸ್ಸನ್ನು ತೊರೆಯುವುದು ತುಂಬಾ ಕಷ್ಟದ ಕೆಲಸ. ರಾಜ್ಯ ತೊರೆದ ಮೇಲೆ ಒಂದು ದಿನ ಭರ್ತೃಹರಿ ಸಾಮಾನ್ಯನಂತೆ ಅಲೆಯುತ್ತ ಮಾರುಕಟ್ಟೆಗೆ ಬಂದ. ಅಲ್ಲಿ ಬಗೆಬಗೆಯ ಸಾಮಾನುಗಳು ಮಾರಾಟವಾಗುತ್ತಿದ್ದವು. ಒಂದು ಅಂಗಡಿಯ ಮುಂದೆ ಸಾಕಷ್ಟು ಜನ ನೆರೆದಿದ್ದರು. ಈತನೂ ಹೋಗಿ ನಿಂತುಕೊಂಡ. ಅದೊಂದು ಸಿಹಿತಿಂಡಿ ತಯಾರುಮಾಡಿ ಮಾರುವ ಅಂಗಡಿ. ತಿಂಡಿಗಳ ಪರಿಮಳ ಎಲ್ಲೆಡೆಗೆ ಹರಡಿತ್ತು. ಅಂಗಡಿಯಾತ ಆಗ ತಾನೇ ಸಿದ್ಧಪಡಿಸಿದ ತಿಂಡಿಗಳನ್ನು ಹೊರಗೆ ತಂದು ಕಟ್ಟೆಯ ಮೇಲೆ ಇಟ್ಟುಕೊಂಡ. ಅದನ್ನು ಕೊಳ್ಳಲು ಜನ ನುಗ್ಗಿದರು. ಅದನ್ನು ಪಡೆದುಕೊಂಡು ತಿಂದವರು ಅದರ ರುಚಿಯನ್ನು ಹೊಗಳುತ್ತಿದ್ದರು. ಭರ್ತೃಹರಿಗೂ ಆ ತಿಂಡಿಯನ್ನು ತಿನ್ನಲೇಬೇಕೆಂಬ ಆಸೆಯಾಯಿತು.

ತನ್ನ ಪಾಳಿ ಬಂದಾಗ ಅಂಗಡಿಯವನಿಗೆ ತಿಂಡಿ ಕೊಡಲು ಹೇಳಿದ. ಅಂಗಡಿಯ ಮಾಲಿಕ ದುಡ್ಡು ಕೇಳಿದ. ಭರ್ತೃಹರಿ ಇಷ್ಟು ವರ್ಷ ಚಕ್ರವರ್ತಿಯಾಗಿದ್ದವನು, ಅವನಿಗೆ ದುಡ್ಡು ಕೊಟ್ಟು ಕೊಳ್ಳುವ ಪ್ರಸಂಗವೇ ಬಂದಿರಲಿಲ್ಲ. ಭರ್ತೃಹರಿ, "ನನ್ನ ಹತ್ತಿರ ದುಡ್ಡೇ ಇಲ್ಲ" ಎಂದ. "ಹಾಗಾದರೆ ತಿಂಡಿ ಸಿಗುವುದು ಸಾಧ್ಯವಿಲ್ಲ. ಮೊದಲು ದುಡ್ಡು ತೆಗೆದು–ಕೊಂಡು ಬಾ, ನಂತರ ತಿಂಡಿ ಕೊಡುತ್ತೇನೆ" ಎಂದ ಅಂಗಡಿಯ ಮಾಲಿಕ.

"ಹಣವನ್ನು ಯಾರು ಕೊಡುತ್ತಾರೆ? ಅದನ್ನು ಹೇಗೆ ಪಡೆಯುವುದು?" ಕೇಳಿದ ಭರ್ತೃಹರಿ.

"ಊರಹೊರಗೆ ಕೆರೆಯ ನಿರ್ಮಾಣವಾಗುತ್ತಿದೆ. ಅಲ್ಲಿಗೆ ಹೋಗಿ ಕೆಲಸಮಾಡು. ನಿನ್ನ ಕೆಲಸಕ್ಕೆ ಪ್ರತಿಯಾಗಿ ಅವರು ಹಣ ಕೊಡುತ್ತಾರೆ. ಅದನ್ನು ತೆಗೆದುಕೊಂಡು ಬಾ" ಎಂದು ಸಲಹೆ ನೀಡಿದ ಅಂಗಡಿಯಾತ.

ಭರ್ತೃಹರಿ ಅಲ್ಲಿಗೆ ಓಡಿದ. ಅಲ್ಲಿ ನೂರಾರು ಜನರು ಕೆಲಸ ಮಾಡುತ್ತಿದ್ದರು. ಈತನಿಗೂ ಒಂದು ಹಾರೆ, ಸಲಿಕೆ ಕೊಟ್ಟರು. ಭರ್ತೃಹರಿ ಒಂದು ಕ್ಷಣವು ಬಿಡದೇ ಬೆವರುಸುರಿಸಿ ಕೆಲಸ ಮಾಡಿದ. ಈ ಕೆಲಸ ಅವನಿಗೆ ಅಭ್ಯಾಸವಿರಲಿಲ್ಲ. ಅಗೆದು, ತೆಗೆದು, ಮಣ್ಣನ್ನು ಹೊತ್ತು ಸಂಜೆಯವರೆಗೂ ದುಡಿದಾಗ ಸಂಜೆಗೆ ಅಧಿಕಾರಿ ಬಂದು ಅವನಿಗೆ ಒಂದಿಷ್ಟು ಹಣ ಕೊಟ್ಟ.

ಅದನ್ನು ತೆಗೆದುಕೊಂಡು ಈತ ಮಿಠಾಯಿ ಅಂಗಡಿಗೆ ಹೋದ. ತನ್ನಲ್ಲಿದ್ದ ದುಡ್ಡಿಗೆ ತಕ್ಕಷ್ಟು ತಿಂಡಿಯನ್ನು ಪಡೆದುಕೊಂಡು ನದೀತೀರಕ್ಕೆ ಬಂದು, ನೀರಿನಲ್ಲಿ ಸ್ವಚ್ಛವಾಗಿ ಕೈ, ಮುಖ ತೊಳೆದುಕೊಂಡು ಕುಳಿತ. ಇನ್ನೇನು ತಿಂಡಿಯನ್ನು ತಿನ್ನಬೇಕು ಎನ್ನುವಾಗ ಭರ್ತೃಹರಿಯ ಬುದ್ಧಿ ಹೇಳಿತು. "ಹುಚ್ಚಾ, ಎಲ್ಲದರಿಂದಲೂ ಮುಕ್ತನಾಗಬೇಕೆಂದು ಚಕ್ರವರ್ತಿಯ ಸಿಂಹಾಸನವನ್ನು ತೊರೆದೆ, ಅತುಳ ಐಶ್ವರ್ಯವನ್ನು ಬಿಟ್ಟೆ, ಸುಂದರಿಯಾದ ಹೆಂಡತಿ, ಅಪರಿಮಿತವಾದ ಅಧಿಕಾರವನ್ನು ಬಿಟ್ಟು ಬಂದೆ. ಆದರೆ ಮಿಠಾಯಿಯ ರುಚಿಯಲ್ಲಿ ಸಿಕ್ಕಿಬಿದ್ದೆಯಲ್ಲ? ಒಂದು ಹಿಡಿ ಮಿಠಾಯಿಯ ಆಸೆಗೆ ದೇಹವನ್ನು ಇಡೀ ದಿನ ದುಡಿಸಿ ಸೋತೆಯಲ್ಲ? ನೀನು ಬಿಟ್ಟದ್ದು ಏನನ್ನು? ನಿನ್ನ ಮನಸ್ಸು ನಿನ್ನ ಹಿಡಿತದಲ್ಲಿದೆಯೇ?"

ಭರ್ತೃಹರಿಗೆ ನಾಚಿಕೆಯಾಯಿತು. ಒಂದೊಂದಾಗಿ ಮಿಠಾಯಿಗಳನ್ನು ನದಿಯ ನೀರಿಗೆ ಎಸೆಯತೊಡಗಿದ. ಕೊನೆಯ ಮಿಠಾಯಿ ಕೈಯಲ್ಲಿದ್ದಾಗ ಮನಸ್ಸು ಮತ್ತೆ ಕೇಳಿತು, "ಇದೊಂದನ್ನಾದರೂ ನನಗೆ ಕೊಡು". ಭರ್ತೃಹರಿ ಮನಸ್ಸನ್ನು ಕಲ್ಲು ಮಾಡಿಕೊಂಡು ಅದನ್ನು ನೀರಿನಲ್ಲಿ ಎಸೆದು ಕುಳಿತ. ಅವನಿಗೆ ತನ್ನ ಮನಸ್ಸನ್ನು ನಿಗ್ರಹಿಸಿದ್ದಕ್ಕೆ ಸ್ವಲ್ಪ ಸಂತೋಷವಾಯಿತು.

ಏನನ್ನಾದರೂ ಮಾಡಬಹುದು ಆದರೆ ಮನಸ್ಸನ್ನು ನಿಲ್ಲಿಸುವುದು ಬಲುಕಷ್ಟ. ಮನುಷ್ಯನ ಬಂಧನಕ್ಕೂ, ಬಿಡುಗಡೆಗೂ ಮನಸ್ಸೇ ಕಾರಣ. ಅದು ಬೀಗಕ್ಕೆ ಬೀಗದ ಕೈ ಇದ್ದ ಹಾಗೆ. ಬೀಗ ಹಾಕುವುದಕ್ಕೂ, ತೆಗೆಯುವುದಕ್ಕೂ ಕೀಲಿಕೈ ಒಂದೇ ಅಲ್ಲವೆ? ಎಡಕ್ಕೆ ತಿರುಗಿಸಿದರೆ ಕೀಲಿ ಬಂದಾಗುತ್ತೆ, ಅದನ್ನೇ ಬಲಕ್ಕೆ ತಿರುಗಿಸಿದರೆ ತೆರೆದುಕೊಳ್ಳುತ್ತದೆ. ಹಾಗೆಯೇ ಮನಸ್ಸನ್ನು ನಿಗ್ರಹಿಸಲು ಸಾಧ್ಯವಾದರೆ ಸಾಧನೆ ಸಿದ್ಧವಾಗುತ್ತದೆ, ಅದನ್ನು ಸಡಿಲಬಿಟ್ಟರೆ ಮಾಡಿದ ಸಾಧನೆ ವ್ಯರ್ಥವಾಗುತ್ತದೆ. ಅದನ್ನು ಬಲು ಎಚ್ಚರದಿಂದ ನೋಡಬೇಕು. ■

**ಶಿಶುಮಂದಿರ:**

**ಪಾಲಕರ ಸಭೆ**

ಶ್ರೀರಾಮ ವಿದ್ಯಾಕೇಂದ್ರದ ಆಶ್ರಯದಲ್ಲಿ ನಡೆಯುವ 2 ಶಿಶುಮಂದಿರಗಳಲ್ಲಿ ಶೈಕ್ಷಣಿಕ ವರ್ಷದ ಮೊದಲನೇ ಪಾಲಕರ ಸಭೆಯನ್ನು ಕರೆಯಲಾಯಿತು. ಪಾಲಕರಿಂದ ಮಕ್ಕಳ ಬಗ್ಗೆ ಬಂದ ಅಭಿಪ್ರಾಯಗಳು

- ❖ ದೇವರಿಗೆ ದೀಪ ಉರಿಸುವುದು ಮನೆಯಲ್ಲಿ ಭಜನೆ ಶ್ಲೋಕ ಹೇಳುವುದು.
- ❖ ತನ್ನ ಕೆಲಸ ತಾನೆ ಮಾಡಿಕೊಳ್ಳುವುದು.
- ❖ ತಟ್ಟೆ ತೊಳೆಯುವುದು ಸ್ನಾನ ಮಾಡುವುದು.
- ❖ ಹಿರಿಯರಿಗೆ ನಮಸ್ಕಾರ ಮಾಡಿ ಬರುವುದು.

ಒಬ್ಬಳೇ ಮಗಳು ಇರುವ ಕಾರಣ ಇಂಗ್ಲಿಷ್ ಮಿಡಿಯಂಗೆ ಸೇರಿಸಲು ಎಲ್ಲರೂ ಒತ್ತಾಯ ಮಾಡಿದರು. ಆದರೂ ನನ್ನ ಮಗುವನ್ನು ಶಿಶುಮಂದಿರಕ್ಕೆ ಸೇರಿಸಿದ್ದೇನೆ. ಎಂದು ಪೋಷಕರೊಬ್ಬರು ಅಭಿಪ್ರಾಯ ವ್ಯಕ್ತಪಡಿಸಿದರು.

**ಶಿಶುಮಂದಿರ ಕಾರ್ಯಾಗಾರ**

ಶ್ರೀರಾಮ ವಿದ್ಯಾಕೇಂದ್ರ ಆಶ್ರಯದ 5 ಶಿಶುಮಂದಿರಗಳ ಪಾಲಕರಿಗೆ ಶಿಶುಮಂದಿರ ಶಿಕ್ಷಣದ ಬಗ್ಗೆ ಕಾರ್ಯಾಗಾರವನ್ನು ನಡೆಸಲಾಯಿತು. ಶಿಶು ಶಿಕ್ಷಣದ ಪ್ರಮುಖರಾದ ಭಗಿನಿ ಗಂಗಾ ಇವರು ಮಗುವಿನ ಬೆಳವಣಿಗೆಯ ಹಂತಗಳು, ಪಂಚಭೂತ ಮತ್ತು ಪಂಚೇಂದ್ರಿಯಗಳ ನಡುವೆ ಇರುವ ಸಮನ್ವಯ ಸಂಗತಿಗಳನ್ನು ತಿಳಿಸಿಕೊಡುತ್ತಾ ಶಿಶುಮಂದಿರದಲ್ಲಿ ಆಟಿಕೆಗಳ ಬಗ್ಗೆ ಮಾಹಿತಿ ನೀಡಿ, ಮಗುವನ್ನು ಅರ್ಥಮಾಡಿಕೊಳ್ಳುವುದು ಹೇಗೆ ಎಂಬುವುದನ್ನು ವಿವರಿಸಿದರು. ಒಟ್ಟು 2 ಶಿಶುಮಂದಿರಗಳ 26 ಪಾಲಕರು ಭಾಗವಹಿಸಿದ್ದರು.

## ವಿವಿಧೆಡೆ ಗುರುಪೂಜೆ–ಗುರುವಂದನೆ:

**ಶಿಶುಮಂದಿರ:** ಕಲ್ಲಡ್ಕ, ಬೊಂಡಾಲ, ಸಜೀಪ, ಅಜ್ಜಿಬೆಟ್ಟು ಶೇಡಿಗುರಿ ಮುಂತಾದೆಡೆ ನಡೆದ ವ್ಯಾಸ ಪೂರ್ಣಿಮೆಯಲ್ಲಿ ಶ್ರೀರಾಮ ಪ್ರಾಥಮಿಕ ಶಾಲೆಯ ಶ್ರೀಮತಿ ರೇಣುಕಾ, ಬೊಂಡಾಲ ಪ್ರಾಥಮಿಕ ಶಾಲೆಯ ಪ್ರೀತ ಮಾತಾಜಿ, ಶ್ರೀಯುತ ಸುಬ್ರಹ್ಮಣ್ಯ ಭಟ್, ಹೆಬ್ಬಾರ್ ಮಾಸ್ಟರು, ಶ್ರೀ ಕಮಲಾಕ್ಷ ಶಂಭೂರು ಇವರುಗಳು ಪುಟಾಣಿಗಳಿಗೆ ಕಥೆಯನ್ನು ಹೇಳಿದರು.

**ಪ್ರಾಥಮಿಕ:** ದಿನಾಂಕ 10.07.2017 ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆ ಕಲ್ಲಡ್ಕದ ವೇದವ್ಯಾಸ ಧ್ಯಾನಮಂದಿರದಲ್ಲಿ ಗುರುಪೂರ್ಣಿಮೆ ಉತ್ಸವವನ್ನು ಆಚರಿಸಲಾಯಿತು. ಶ್ರೀರಾಮ ಶಿಶುಮಂದಿರ ವ್ಯವಸ್ಥಾಪಕಿ ಶ್ರೀಮತಿ ಸುಧಾ ಸೂರ್ಯಭಟ್ ಗುರುಪೂರ್ಣಿಮೆಯ ಮಹತ್ವವನ್ನು ತಿಳಿಸಿಕೊಟ್ಟರು. ವೇದಿಕೆಯಲ್ಲಿ ಹಿರಿಯರಾದ ಶ್ರೀಮತಿ ಭವಾನಿ, ಮಾತೃಭಾರತಿ ಸದಸ್ಯರಾದ ಶ್ರೀಮತಿ ಧನಲಕ್ಷ್ಮೀ, ಶ್ರೀಮತಿ ಆಶಾ, ಶ್ರೀಮತಿ ವೀಣಾ ಹಾಗೂ ಮುಖ್ಯೋಪಾಧ್ಯಾಯ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

**ಪ್ರೌಢ:** ಮೊದಲು ನಮ್ಮನ್ನು ನಾವು ತಿಳಿಯುವುದೇ ಜ್ಞಾನ. ನಾವು ಗಳಿಸಿದ ಜ್ಞಾನ ಪಕ್ವಗೊಳ್ಳಬೇಕಾದರೆ ಗುರು ಬೇಕು. ವಿದ್ಯಾರ್ಥಿಗಳಿಗೆ ಗುರುವಿನ ಮೇಲೆ ಗೌರವ ನೀಡುವ, ಸಮರ್ಪಣಾಗುಣ ಇದ್ದರೆ, ಆತ ಯಶಸ್ಸಿನೆಡೆಗೆ ಸಾಗುತ್ತಾನೆ ಎಂದು ಶ್ರೀರಾಮ ಪದವಿ ಪೂರ್ವ ಕಾಲೇಜಿನ ಇತಿಹಾಸ ಉಪನ್ಯಾಸಕ ತಿರುಮಲೇಶ್ವರ ಪ್ರಶಾಂತ್ ತಿಳಿಸಿದರು. ಅವರು ಶ್ರೀರಾಮ ಪ್ರೌಢಶಾಲೆಯಲ್ಲಿ ನಡೆದ ಗುರುಪೂಜೋತ್ಸವ ಕಾರ್ಯಕ್ರಮದಲ್ಲಿ ಬೌದ್ಧಿಕ್ ನೀಡಿದರು.

ವಿದ್ಯಾರ್ಥಿಗಳು ಭಾರತಮಾತೆಗೆ ಅರ್ಚನೆ ಮಾಡಿ ಗುರು ಹಿರಿಯರಿಂದ ತಿಲಕಧಾರಣೆ ಪಡೆದು ಆಶೀರ್ವಾದ ಪಡೆದರು. ವೇದಿಕೆಯಲ್ಲಿ ಶ್ರೀ ಜಯಕುಮಾರ್ ನಿವೃತ್ತ ಮುಖ್ಯ ಶಿಕ್ಷಕರು ಸರಕಾರಿ ಪ್ರೌಢಶಾಲೆ ಗೋಳ್ತಮಜಲು, ಶ್ರೀ ಗೋವಿಂದ ಭಟ್, ನಿವೃತ್ತ ಉಪನ್ಯಾಸಕರು ವಿಟ್ಲ ಪದವಿ ಪೂರ್ವ ಕಾಲೇಜ್, ಶ್ರೀ ಶಂಕರನಾರಾಯಣ ಭಟ್ ಮೊಗಸಾಲೆ ನಿವೃತ್ತ ಮುಖ್ಯ ಶಿಕ್ಷಕರು ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ ಮಾದಕಟ್ಟೆ ಇವರಿಗೆ ಪ್ರೌಢಶಾಲಾ ವಿಭಾಗದ ಮುಖ್ಯ ಶಿಕ್ಷಕರಾದ ಶ್ರೀ ರಮೇಶ್ ಎನ್ ಇವರು ಗೌರವಪೂರ್ವಕವಾಗಿ ಗುರುವಂದನೆ ಸಲ್ಲಿಸಿದರು.

**ಪದವಿ:** ಸಂಸ್ಕೃತ ಸಂಘದ ವತಿಯಿಂದ ಗುರುವಂದನಾ ಹಾಗೂ ಹರಿಕಥಾ ಕಾರ್ಯಕ್ರಮ

ಶ್ರೀರಾಮ ಪದವಿಕಾಲೇಜಿನ ಪ್ರದ್ಯೋತ ಸಂಸ್ಕೃತ ಸಂಘವನ್ನು ಹಿರಿಯ ಶಿಕ್ಷಕ ಸ್ಕೌಟ್‌ನ ವಿಶೇಷ ಸಾಧನೆಗೆ ರಾಜ್ಯಪಾಲರಿಂದ ಪುರಸ್ಕೃತರಾದ ಜಯಂತನಾಯಕ್ ಕುಂಡೇರಿ ಉದ್ಘಾಟಿಸಿದರು. ಗುರುಪೂರ್ಣಿಮೆಯ ನಿಮಿತ್ತ ನಡೆದ ಗುರುವಂದನಾವನ್ನು ಜಯಂತನಾಯಕ್ ಕುಂಡೇರಿ ಹಾಗೂ ಇನ್ನೋರ್ವ ಹಿರಿಯ, ನಿವೃತ್ತ ಶಿಕ್ಷಕಿ ಜಯಲಕ್ಷ್ಮಿ ನಂದೋಡಿ ಸ್ವೀಕರಿಸಿದರು.

ಇದೇ ಸಂದರ್ಭದಲ್ಲಿ ಇಂದು ನಶಿಸಿಹೋಗುತ್ತಿರುವ, ಯುವ ಜನಾಂಗದಿಂದ ದೂರ ಉಳಿದಿರುವ ಒಂದು ಕಲಾಪ್ರಕಾರವಾದ ಹರಿಕಥೆಯನ್ನು ಉತ್ತರಕನ್ನಡ ಶಿರಸಿಯ ಈಶ್ವರದಾಸ ಕೊಪ್ಪೆಸರ ಇವರು ನಡೆಸಿಕೊಟ್ಟರು . ಭಕ್ತಪ್ರಹ್ಲಾದ ಎಂಬ ಕಥೆಯನ್ನಾಧರಿಸಿದ ಹರಿಕಥೆಯು ಇಂದಿನ ಪ್ರಸ್ತುತ ಸನ್ನಿವೇಶಕ್ಕೆ ಹೇಗೆ ಸೂಕ್ತವಾಗುತ್ತದೆ ಎಂದು ನಿರೂಪಿಸಿದರು.

## ಕಾರ್ಗಿಲ್ ವಿಜಯ ದಿನೋತ್ಸವ ಹಾಗೂ ಸಂಸ್ಮರಣಾ ದಿನಾಚರಣೆ

**ಪ್ರಾಥಮಿಕ ಶಾಲೆ:** ಕಾರ್ಗಿಲ್ ಸಂಸ್ಮರಣಾ ದಿನಾಚರಣೆಯನ್ನು ದೇಶಸೇವೆ ಮಾಡಿ ನಿವೃತ್ತ ಸೈನಿಕರಾದ ಶ್ರೀ ಹರೀಶ್ ದೇವರಗುಂಡಿ ಹಾಗೂ ದಿನೇಶ್ ನೆಟ್ಲ ಜೊತೆಗೆ ಪ್ರಸ್ತುತ ಸೇವೆಗೈಯುತ್ತಿರುವ ಶ್ರೀರಾಮ ವಿದ್ಯಾಕೇಂದ್ರದ ಹಿರಿಯ ವಿದ್ಯಾರ್ಥಿಯಾದ ಶ್ರೀ ಸಂತೋಷ್ ನೆಟ್ಲ ಇವರಿಗೆ ಸಂಸ್ಥೆಯ ಹಿರಿಯರಾದ ಡಾ.ಪ್ರಭಾಕರ ಭಟ್ ಕಲ್ಲಡ್ಕ ಇವರು ಗೌರವಿಸಿದರು. ವೀರ ಯೋಧರು ಸೇನೆಯ ಬಗ್ಗೆ ಗೌರವದಿಂದ ಮಾತನಾಡಿ ವಿದ್ಯಾರ್ಥಿಗಳು ದೇಶ ಸೇವೆ ಮಾಡಲು ಇಂದಿನಿಂದಲೇ ಕಂಕಣಬದ್ಧರಾಗಬೇಕು ಎಂದು ಪ್ರೇರೇಪಿಸಿದರು. ವೇದಿಕೆಯಲ್ಲಿ ಶಿವಗಿರಿ ಸತೀಶ್ ಭಟ್, ಕಮಲಾ ಪ್ರಭಾಕರ ಭಟ್, ಮುಖ್ಯೋಪಾಧ್ಯಯರಾದ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

**ಪ್ರೌಢಶಾಲೆ:** ಈ ದಿನ ನಮ್ಮೆಲ್ಲರಿಗೂ ಅತ್ಯಂತ ಪ್ರೇರಣಾದಾಯಿಯಾದ ದಿನ. 1999ನೇ ಇಸವಿಯಲ್ಲಿ ಪಾಕಿಸ್ತಾನ ನಮ್ಮ ದೇಶದ ಮೇಲೆ ದಾಳಿ ನಡೆಸಿದ ಸಂದರ್ಭದಲ್ಲಿ ನಮ್ಮ ದೇಶದ ಸೈನಿಕರ ಕಾರ್ಯೋತ್ಸಾಹ, ತ್ಯಾಗ, ಪೌರುಷಗಳ ಫಲ ಕಾರ್ಗಿಲ್ ವಿಜಯವಾಗಿದೆ. ಎಂದು ಶ್ರೀ ಅಶೋಕ್, ಕನ್ನಡ ಉಪನ್ಯಾಸಕರು ಶ್ರೀರಾಮ ಪ.ಪೂ ಕಾಲೇಜ್ ಅವರು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ರಮೇಶ್ ಎನ್ ವಹಿಸಿದರು.

**ನಾನು ಸೈನ್ಯಕ್ಕೆ ಸೇರಲು ಈ ಶಾಲೆಯೇ ಪ್ರೇರಣೆ. ಈ ಶಾಲೆಯಲ್ಲಿ ಕಲಿಸಿದ ಶಾರೀರಿಕ, ಯೋಗ ಇದು ನನ್ನ ಸೈನಿಕ ಜೀವನಕ್ಕೆ ತುಂಬಾ ಸಹಕಾರಿಯಾಗಿದೆ. ಸೈನ್ಯದಲ್ಲಿಯೂ ಯೋಗ ಶಿಕ್ಷಣವನ್ನು ನೀಡುತ್ತಿದ್ದು ಯೋಗ ದಿನಾಚರಣೆಯ ಸಂದರ್ಭದಲ್ಲಿ 4000 ಜನರಿಗೆ ಯೋಗ ಶಿಕ್ಷಣವನ್ನು ನೀಡುವ ಅವಕಾಶ ನನಗೆ ಸಿಕ್ಕಿದೆ. ಇದಕ್ಕೆಲ್ಲಾ ಮೂಲ ಕಾರಣ ಶ್ರೀರಾಮ ವಿದ್ಯಾಕೇಂದ್ರ – ಸನ್ಮಾನ ಸ್ವೀಕರಿಸಿದ ಕಾರ್ಗಿಲ್ ಯುದ್ಧದಲ್ಲಿ ಭಾಗಿಯಾದ ಶ್ರೀ ಭಾಸ್ಕರ ಅಮ್ಟೂರು ತಿಳಿಸಿದರು.**

**ಪದವಿ** ಜುಲೈ 26: ಪ್ರಭವ ಸಾಹಸಿಗರ ಸಂಘ ಇದರ ಉದ್ಘಾಟನೆ ಮತ್ತು ಕಾರ್ಗಿಲ್ ವಿಜಯ ದಿವಸದಲ್ಲಿ ಉದ್ಘಾಟಕರಾಗಿ ನ್ಯಾಯವಾದಿ ಶ್ರೀಮತಿ ಆಶಾ ಪ್ರಸಾದ್ ರೈ ವಿದ್ಯಾರ್ಥಿಗಳಿಗೆ ಚಿತ್ರರಂಗದ ನಾಯಕರು ನಿಜವಾದ ನಾಯಕರಲ್ಲ ಬದಲಾಗಿ ನಮ್ಮ ಇವತ್ತಿಗೋಸ್ಕರ ಅವರ ನಾಳೆಗಳನ್ನು ಬಲಿಕೊಡುತ್ತಿರುವ ನಮ್ಮ ರಾಷ್ಟ್ರದ ಹೆಮ್ಮೆಯ ಸೈನಿಕರು ನಿಜವಾದ ನಾಯಕರು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಶುಂಪಾಲ ಕೃಷ್ಣಪ್ರಸಾದ ಕಾಯರ್ ಕಟ್ಟೆ ಮಾತಾಡುತ್ತಾ, ಸೈನ್ಯ ಸೇರಲು ಆಸಕ್ತಿ ಇರುವ ವಿದ್ಯಾರ್ಥಿಗಳಿಗೆ ನಮ್ಮ ಸಂಸ್ಥೆಯಲ್ಲಿ ಮಿಲಿಟರಿ ತರಬೇತಿ ಕೇಂದ್ರ ಪ್ರಾರಂಭಿಸಲಾಗಿದ್ದು ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆಯಬಹುದು ಎಂದರು.

ವೇದಿಕೆಯಲ್ಲಿ ಸಾಹಸಿಗರ ಸಂಘದ ನಿರ್ದೇಶಕ ಗಂಧರ್ವ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸಂಘದ ಕಾರ್ಯದರ್ಶಿ ಕು.ರಮ್ಯಶ್ರೀ ನಿರೂಪಿಸಿ ಸಂಘದ ಅಧ್ಯಕ್ಷ ಗೌರೀಶ ವಂದಿಸಿದರು.

**ವೇದತರಗತಿ:** 01.07.2017 ಪ್ರೌಢಶಾಲಾ ವಿಭಾಗದ ವೇದ ತರಗತಿ ಉದ್ಘಾಟಿಸಲಾಯಿತು. ಮುಖ್ಯೋಪಾಧ್ಯಾಯರಾದ ಶ್ರೀ ರಮೇಶ್ ಎನ್ ಕಾರ್ಯಕ್ರಮ ಉದ್ಘಾಟಿಸಿ, ಶ್ರೀ ಅರುಣ್ ಪೆರ್ಲ ಇವರು ವೇದ ತರಗತಿಯನ್ನು ನಡೆಸಿ ಕೊಡುತ್ತಿದ್ದಾರೆ. ಪ್ರತೀ ಶನಿವಾರ ವಿದ್ಯಾಸಂಸ್ಥೆಯ ಎಲ್ಲಾ ವರ್ಗದವರಿಗೆ ಯಾವುದೇ ತಪ್ಪುಗಳು ಬಾರದಂತೆ ವೇದಮಂತ್ರವನ್ನುಕಲಿಸುವ ವ್ಯವಸ್ಥೆ ಇದಾಗಿದೆ.

## ಶಾಲಾ ಸಂಸತ್ತು, ವಿವಿಧ ಸಂಘಗಳು ಹಾಗೂ ವಿದ್ಯಾರ್ಥಿ ಸಂಘಗಳ ಉದ್ಘಾಟನೆ:

**ಪ್ರಾಥಮಿಕ ಶಾಲೆ** 06.07.2017: ವಿದ್ಯಾರ್ಥಿಗಳ ಸಂಸತ್ತಿನ ರಚನೆಯು ಮತದಾನದ ಮೂಲಕ ನಡೆದು ಆಯ್ಕೆಯಾದ ಅಭ್ಯರ್ಥಿಗಳ ಪ್ರಮಾಣವಚನ ಸ್ವೀಕಾರ ನಡೆಯಿತು.

ಹಿರಿಯ ವಿದ್ಯಾರ್ಥಿ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಚೆನ್ನಪ್ಪ ಕೋಟ್ಯಾನ್ ಸಂಸತ್ತಿನ ಬಗ್ಗೆ ಸವಿವರವಾಗಿ ಮಾಹಿತಿಯನ್ನು ನೀಡಿದರು. ವಿದ್ಯಾಕೇಂದ್ರದ ಸಂಚಾಲಕರಾದ ವಸಂತ ಮಾಧವ, ಕುಲ್ಯಾರು ನಾರಾಯಣ ಶೆಟ್ಟಿ, ಮುಖ್ಯೋಪಾಧ್ಯಾಯ ರವಿರಾಜ್ ಕಣಂತೂರು, ಭ.ಗಂಗಾ ಉಪಸ್ಥಿತರಿದ್ದರು.

**ವಿವಿಧ ಸಂಘಗಳ ಉದ್ಘಾಟನೆ:** ವಿದ್ಯಾರ್ಥಿಗಳಲ್ಲಿ ಸಂಘಟನಾ ಕೌಶಲ ಬೆಳೆಸಲು ಮತ್ತು ಸಮಾಜಮುಖಿ ಸಂಘಟನೆಗಳಲ್ಲಿ ತೊಡಗಿಸಿಕೊಳ್ಳುವ ಉದ್ದೇಶದಿಂದ ರಚಿಸಲಾದ ವಿವಿಧ ಸಂಘಗಳ ಉದ್ಘಾಟನೆಯನ್ನು ಶ್ರೀ ಗಣೇಶ್ ಕಾಮತ್ ವೈದ್ಯರು ಯೆನಪೋಯ ಆಸ್ಪತ್ರೆ ನೆರವೇರಿಸಿದರು. ಶ್ರೀ ಸಂತೋಷ್ ಪೈ ವೈದ್ಯರು ಯೆನಪೋಯ ಆಸ್ಪತ್ರೆ, ವೇದಿಕೆಯಲ್ಲಿ ಉಪಸ್ಥಿತರಿದ್ದ ದಾಮೋದರ ಮಾರ್ಲ ಮತ್ತು ನಾಗೇಶ್ ಕಲ್ಲಡ್ಕ ವಿದ್ಯಾರ್ಥಿಗಳಿಗೆ ವಿದ್ಯಾಕೇಂದ್ರದ ಮಾರ್ಗದರ್ಶಕರಾದ ಪ್ರಭಾಕರ ಭಟ್ ಕಲ್ಲಡ್ಕ, ವಿದ್ಯಾಕೇಂದ್ರದ ಸಂಚಾಲಕರು ವಸಂತ ಮಾಧವ ಉಪಸ್ಥಿತರಿದ್ದರು.

**ಪ್ರೌಢಶಾಲೆ 10.07.2017:** ವಿವಿಧ ರೀತಿಯ 18 ವಿದ್ಯಾರ್ಥಿಗಳ ಸಂಘಗಳನ್ನು ಉದ್ಘಾಟಿಸಲಾಯಿತು.

ಮುಖ್ಯೋಪಾಧ್ಯಾಯರಾದ ಶ್ರೀ ರಮೇಶ್ ಎನ್ ಸಂಘದ ನಾಮಫಲಕ ಪರದೆಯನ್ನು ಸರಿಸುವ ಮೂಲಕ ಉದ್ಘಾಟನೆ ನೆರವೇರಿಸಿದರು. ಈ ಸಂದರ್ಭದಲ್ಲಿ ಶ್ರೀ ಗೋವಿಂದ ಭಟ್ ನಿವೃತ್ತ ಉಪನ್ಯಾಸಕರು ವಿಟ್ಲ ಪ.ಪೂ.ಕಾಲೇಜು, ಶ್ರೀ ಶಂಕರನಾರಾಯಣ ಭಟ್ ಮೊಗಸಾಲೆ ನಿವೃತ್ತ ಮುಖ್ಯ ಶಿಕ್ಷಕರು, ಅ.ಹಿ.ಪ್ರಾ.ಶಾಲೆ ಮಾದಕಟ್ಟೆ, ಶ್ರೀ ಜಯಕುಮಾರ್ ನಿ.ಮು.ಶಿ. ಸ.ಪ್ರೌಢಶಾಲೆ ಗೋಳ್ತಮಜಲು, ಶ್ರೀ ತಿರುಮಲೇಶ್ವರ ಪ್ರಶಾಂತ್ ಇತಿಹಾಸ ಉಪನ್ಯಾಸಕರು ಶ್ರೀರಾಮ ಪ.ಪೂ. ಕಾಲೇಜು ಉಪಸ್ಥಿತರಿದ್ದರು.

**ಪದವಿ ಪೂರ್ವ 05-07-2017:** ಕಾಲೇಜಿನ 'ಭರತ' ವಿದ್ಯಾರ್ಥಿ ಸಂಘದ ಉದ್ಘಾಟನೆಯನ್ನು ದ.ಕ. ಜಿಲ್ಲಾ ಬಿ.ಜೆ.ಪಿ. ಉಪಾಧ್ಯಕ್ಷರಾದ ಶ್ರೀ ಜಗದೀಶ್ ಅಧಿಕಾರಿಯವರು ಮಾಡಿದರು. ಇವರು ಮಾತನಾಡುತ್ತಾ ಅರ್ಪಣಾ-ಸಮರ್ಪಣಾ ಭಾವದಿಂದ ಜೀವನ ನಡೆಸಿ, ದೇಶದ ಪವಿತ್ರ ಮುತ್ತು ರತ್ನಗಳಾಗಿ ಭಾರತ ವಿಶ್ವ ಗುರುವಾಗುವಲ್ಲಿ ವಿದ್ಯಾರ್ಥಿ ಸಮೂಹ ಕೈ ಜೋಡಿಸಬೇಕಾಗಿ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಸಂಚಾಲಕರಾದ ಶ್ರೀ ವಸಂತ ಮಾಧವ ಅಧ್ಯಕ್ಷೀಯ ನುಡಿ ನುಡಿದರು. ಪ್ರಾಚಾರ್ಯ ವಸಂತ್ ಬಲ್ಲಾಳ್ ಹಾಗೂ ವಿದ್ಯಾರ್ಥಿ ಸಂಘದ ಸಹನಿರ್ದೇಶಕಿ ಶ್ರೀಮತಿ ಶೋಭಾ ವಿ ಶೆಟ್ಟಿ ಉಪಸ್ಥಿತರಿದ್ದರು. ಸಂಘದ ಅಧ್ಯಕ್ಷರಾಗಿ ಯಶಸ್, ಕಾರ್ಯದರ್ಶಿಯಾಗಿ ಚೇತನ್ ರಾಜ್, ಹಾಗೂ ಸಹಕಾರ್ಯದರ್ಶಿಯಾಗಿ ಕುಮಾರಿ ಅನುಪಮರವರು ಆಯ್ಕೆಯಾಗಿರುತ್ತಾರೆ. ವಿದ್ಯಾರ್ಥಿ ನಾಯಕರು ಹಾಗೂ ಸಂಘದ ಪದಾಧಿಕಾರಿಗಳು ಪ್ರಮಾಣ ವಚನ ಸ್ವೀಕರಿಸುವುದರ ಮೂಲಕ ವಿದ್ಯಾರ್ಥಿ ಸಂಘಕ್ಕೆ ಚಾಲನೆ ನೀಡಲಾಯಿತು.

**ಪ್ರಣವ ವಿದ್ಯಾರ್ಥಿ ಸಂಘದ ಉದ್ಘಾಟನೆ ಜು 7:** ಅರ್ಥಶಾಸ್ತ್ರಜ್ಞ, ಚಿಂತಕ, ಲೇಖಕರು ಆಗಿರುವ ಶ್ರೀಯುತ ಡಾ. ಪ್ರಭಾಕರ ಶಿಶಿಲ ಉದ್ಘಾಟಿಸಿದರು. ನಿವೃತ್ತ ಪ್ರಾಂಶುಪಾಲ ಶ್ರೀ ಮಹೇಶ್ವರ ಭಟ್ ಅಧ್ಯಕ್ಷತೆ ವಹಿಸಿದ್ದರು. ಶ್ರೀ ವಸಂತ ಮಾಧವ ಹಾಗೂ ವಿದ್ಯಾರ್ಥಿಸಂಘದ ನಿರ್ದೇಶಕ ಸಚಿನ್ ಉಪಸ್ಥಿತರಿದ್ದರು. ಕಾಲೇಜಿನ ಪ್ರಾಂಶುಪಾಲ ಕೃಷ್ಣಪ್ರಸಾದ ಕಾಯರ್ ಕಟ್ಟೆ ವಿದ್ಯಾರ್ಥಿ ನಾಯಕರುಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ವಿದ್ಯಾರ್ಥಿ ನಾಯಕನಾಗಿ ಅಜಿತ್ ಕುಮಾರ್, ಕಾರ್ಯದರ್ಶಿಯಾಗಿ ಮಂಜುನಾಥ್, ಜೊತೆ ಕಾಯದರ್ಶಿಯಾಗಿ ಅಖಿಲಾ, ವಿವಿಧ ಸಂಘಗಳ ಪದಾಧಿಕಾರಿಗಳು, ತರಗತಿ ಪ್ರತಿನಿಧಿಗಳು ಪ್ರಮಾಣವಚನ ಸ್ವೀಕರಿಸಿದರು.

---

**ಪ್ರೌಢಶಾಲೆ:** ಕರಾಟೆ ತರಬೇತಿ ತರಗತಿ ಯನ್ನು ಮುಖ್ಯೋಪಾಧ್ಯಾಯರು ಶ್ರೀ ರಮೇಶ್ಎನ್ ಉದ್ಘಾಟಿಸಿದರು. ಪ್ರೌಢಶಾಲಾ ವಿಭಾಗದ ಮುಖ್ಯ ಶಿಕ್ಷಕರಾದ. ಈ ಸಂದರ್ಭದಲ್ಲಿ ತರಬೇತುದಾರರಾದ ಶ್ರೀ ದಿನೇಶ್, ಸಂಯೋಜಕರಾದ ಶ್ರೀ ಮನೋಜ್ ಸಹಶಿಕ್ಷಕರು ಉಪಸ್ಥಿತರಿದ್ದರು. 30 ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಿದ್ದಾರೆ.

**ದೃಷ್ಟಿ ದೋಷ ತಪಾಸಣಾ ಶಿಬಿರ 22.07.2017**

**ಪ್ರೌಢಶಾಲೆ:** ವಿದ್ಯಾರ್ಥಿಗಳ ದೃಷ್ಟಿದೋಷ ತಪಾಸಣಾ ಶಿಬಿರ ಕಾರ್ಯಕ್ರಮ ನೆರವೇರಿತು. ಡಾ। ಶಾಂತರಾಜ್, ನೇತ್ರಾಧಿಕಾರಿ ಬಂಟ್ವಾಳ ಆರೋಗ್ಯ ಕೇಂದ್ರ ಇವರು ವಿದ್ಯಾರ್ಥಿಗಳ ನೇತ್ರ ಪರೀಕ್ಷೆಯನ್ನು ನೆರವೇರಿಸಿ, ದೃಷ್ಟಿದೋಷದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿರುತ್ತಾರೆ.

**ಪದವಿ:** ಪ್ರಣತಿ ಇಂಗ್ಲೀಷ್ ಸಂಘದ ವತಿಯಿಂದ ದಿನಾಂಕ 02-07-2017ರಿಂದ 18-07-2017ರವರೆಗೆ ಸ್ಪೋಕನ್ ಇಂಗ್ಲೀಷ್ ಕ್ಲಾಸ್ ನಡೆಯಿತು. ಉಪನ್ಯಾಸಕಿಯರಾದ ಶ್ರೀದೇವಿ ಮಾತಾಜಿ ಮತ್ತು ಲತಾಶ್ರೀ ಮಾತಾಜಿ ನಡೆಸಿಕೊಟ್ಟರು. ಒಟ್ಟು ಪ್ರಥಮ ವರ್ಷದ 118ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡರು.

**ಪದವಿ:** ದಿನಾಂಕ 21-07-2017: ಪ್ರದೀಪ್ತ ಸಾಂಸ್ಕೃತಿಕ ಸಂಘದ ಉದ್ಘಾಟನೆ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮ

**ಪದವಿ:** ಪ್ರದೀಪ್ತ ಸಾಂಸ್ಕೃತಿಕ ಸಂಘದ ಉದ್ಘಾಟನೆಯನ್ನು ವಿವೇಕಾನಂದ ಶಿಕ್ಷಣ ಮಹಾವಿದ್ಯಾಲಯ ಪುತ್ತೂರು ಇದರ ಉಪನ್ಯಾಸಕಿ ಡಾ। ಶೋಭಿತಾ ಸತೀಶ್ ಉದ್ಘಾಟಿಸಿ, ಈ ವಿದ್ಯಾ ಸಂಸ್ಥೆಯು ಭಾರತೀಯ ಸಂಸ್ಕಾರದ ತಳಹದಿಯನ್ನು ಹೊಂದಿದೆ ಎಂದು ಅಭಿಪ್ರಾಯ ಪಟ್ಟರು.

ವೇದಿಕೆಯಲ್ಲಿ ನ್ಯಾಯವಾದಿಗಳು ಮತ್ತು ಶ್ರೀರಾಮ ಆಡಳಿತ ಮಂಡಳಿಯ ಸದಸ್ಯರು ಆದ ಶ್ರೀಮತಿ ಆಶಾಪ್ರಸಾದ್, ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರೂ ಆದ ಶ್ರೀ ಲಕ್ಷ್ಮಿ ಗೋಪಾಲಾಚಾರ್ಯ ಮತ್ತು ಪ್ರಾಂಶುಪಾಲ ಕೃಷ್ಣಪ್ರಸಾದ ಕಾಯರಕಟ್ಟೆ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಅಂತಿಮ ವರ್ಷದ ಒಟ್ಟು 137 ವಿದ್ಯಾರ್ಥಿಗಳು ಭಾರತ ವೈಭವ ವಿಷಯದ ಕುರಿತು ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು.

ವಾಣಿಜ್ಯ ಉಪನ್ಯಾಸಕಿ ಶ್ರೀಮತಿ ಹರ್ಷಿತಾ ಕಾರ್ಯಕ್ರಮ ನಿರೂಪಿಸಿ, ಸಂಘದ ನಿರ್ದೇಶಕಿ ಶ್ರೀಮತಿ ಜಯಲಕ್ಷ್ಮಿ ಸ್ವಾಗತಿಸಿ, ಅಂತಿಮ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಶಿಲ್ಪಾ ವಂದಿಸಿದರು.

**ಪದವಿ:** ದಿನಾಂಕ 31-07-2017: ರಾಷ್ಟ್ರೀಯ ಸೇವಾ ಯೋಜನೆ ಸಭೆ ಮಂಗಳೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನಾ ವಿಭಾಗವು ರಾ. ಸೇ. ಯೋಜನಾಧಿಕಾರಿಗಳ ಸಭೆಯನ್ನು ಆಯೋಜಿಸಿತು. .ಪದವಿ ವಿಭಾಗದ ರಾ. ಸೇ. ಯೋಜನಾಧಿಕಾರಿ ಅರ್ಥಶಾಸ್ತ್ರ ಉಪನ್ಯಾಸಕ ಶ್ರೀ ಹರೀಶ್ ಭಾಗವಹಿಸಿದ್ದರು.

**ಜಿಲ್ಲಾ ಮಟ್ಟದಲ್ಲಿ ಮಿಂಚಿದ ಚಿಣ್ಣರು**

ಬೆಟ್ಟಂಪಾಡಿ ಪ್ರಿಯದರ್ಶಿನಿ ವಿದ್ಯಾಕೇಂದ್ರದಲ್ಲಿ ನಡೆದ ವಿದ್ಯಾಭಾರತಿ ಜಿಲ್ಲಾ ಮಟ್ಟದ ಕ್ರೀಡಾಕೂಟದ ವಿವರಗಳು:

**ಪ್ರಾಥಮಿಕ ಶಾಲೆ** ವಿದ್ಯಾರ್ಥಿ, ವಿದ್ಯಾರ್ಥಿನಿಯರು:- ದೀಕ್ಷಿತಾ 4*100ಮೀ ರಿಲೇ ಪ್ರಥಮ, 400 ಮತ್ತು 200ಮೀ ಓಟ ತೃತೀಯ, ಪ್ರಣೀತ 4*100ಮೀ ರಿಲೇ ಮತ್ತು ಉದ್ದಜಿಗಿತ ಪ್ರಥಮ, ಶ್ರಾವ್ಯ ಎತ್ತರ ಜಿಗಿತ ಪ್ರಥಮ, ಪುಲಕಿತ ಎತ್ತರ ಜಿಗಿತ ದ್ವಿತೀಯ, ಅನುಷಾ ಆಳ್ವ ಮತ್ತು ಮೋಕ್ಷಲಕ್ಷ್ಮೀ 4*100ಮೀ ರಿಲೇ ಪ್ರಥಮ, ತೃಜೇಶ್ ಉದ್ದಜಿಗಿತ ತೃತೀಯ ಸ್ಥಾನ ಪಡೆದಿರುತ್ತಾರೆ.

**ಪ್ರೌಢಶಾಲೆ:** 46 ಕ್ರೀಡಾಪಟುಗಳು ಭಾಗವಹಿಸಿರುತ್ತಾರೆ. ಇದರಲ್ಲಿ 14 ವರ್ಷದೊಳಗಿನ ವಿಭಾಗದಲ್ಲಿ 9 ಹುಡುಗರು ಮತ್ತು 10 ಹುಡುಗಿಯರು, 17 ವರ್ಷದೊಳಗಿನ ವಿಭಾಗದಲ್ಲಿ 19 ಹುಡುಗರು ಮತ್ತು 8 ಹುಡುಗಿಯರು ಸ್ಪರ್ಧಿಸಿರುತ್ತಾರೆ. ನಿಖಿಲ್, ದೀಕ್ಷಾ ಎಂ, ಗಾಯತ್ರಿ, ಪಾಯಕೊಂಗ್‌ಖ್ಲ್ಯಾಡ್, ಸ್ವದೇಶ್, ಪೂಜಾ ಜೆ ಶೆಟ್ಟಿ ಪ್ರಾಂತವನ್ನು ಪ್ರತಿನಿಧಿಸಲಿದ್ದಾರೆ.

**ಪ.ಪೂ:** 12/7/17 ರಂದು ಭಾವನಾ ಸಂಘವನ್ನು ಪ್ರೌಢಶಾಲಾ ಶಿಕ್ಷಕರಾದ ಜಿನ್ನಪ್ಪ ಶ್ರೀಮಾನ್ ಉದ್ಘಾಟಿಸಿದರು. ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶ್ರೀ ವಸಂತ ಬಲ್ಲಾಳ್ ಶ್ರೀಮಾನ್ ಹಾಗೂ ಸಂಘದ ನಿರ್ದೇಶಕಿಯಾದ ಶ್ರೀಮತಿ ರಶ್ಮಿ ಉಪಸ್ಥಿತರಿದ್ದರು. ಕಾರ್‍ಯಕ್ರಮವನ್ನು ಕುಮಾರಿ ಶಿಲ್ಪಾ ನಿರ್ವಹಿಸಿದರು. ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಂದ ಪ್ರತಿಭಾನ್ವೇಷಣೆ ನಡೆಯಿತು.

# ಶ್ರೀರಾಮ ವಿದ್ಯಾಕೇಂದ್ರದಲ್ಲಿ 2017-18 ನೇ ಸಾಲಿಗೆ ದಾಖಲಾದ ವಿದ್ಯಾರ್ಥಿಗಳ ಹಾಗೂ ಇನ್ನಿತರ ವಿಭಾಗಗಳ ವಿಭಾಗವಾರು ಸಂಖ್ಯೆ

| ತರಗತಿ ಹೆಸರು | | ಹೆಣ್ಣು | ಒಟ್ಟು |
|---|---|---|---|
| **ಶ್ರೀರಾಮ ಶಿಶುಮಂದಿರ** | | | |
| ಲವ | **15** | **12** | **27** |
| ಕುಶ | **15** | **11** | **26** |
| ಧ್ರುವ | **13** | **14** | **27** |
| ಗಾರ್ಗಿ | **15** | **11** | **26** |
| ಶಬರಿ | **14** | **13** | **27** |
| ಸಾಂದೀಪನಿ | **16** | **10** | **26** |
| **ಶ್ರೀ ಗಣೇಶ ಶಿಶುಮಂದಿರ** | **5** | **11** | **16** |
| **ಅಕ್ಕಮಹಾದೇವಿ ಶಿಶುಮಂದಿರ** | 11 | **13** | **24** |
| **ಶ್ರೀ ಕೃಷ್ಣ ಶಿಶುಮಂದಿರ** | 15 | **12** | **27** |
| **ಸರಸ್ವತಿ ಶಿಶುಮಂದಿರ** | 13 | **4** | **17** |
| | **132** | **111** | **243** |
| **ಪ್ರಾಥಮಿಕ ಶಾಲೆ** | | | |
| 1ನೇ ಶಾರದಾದೇವಿ | 13 | 15 | 28 |
| 1ನೇ ಯಾದವ | 15 | 13 | 82 |
| 1ನೇ ಶ್ರೀಕೃಷ್ಣ | 14 | 13 | 27 |
| 1ನೇ ಸುಧಾಮ | 13 | 14 | 27 |
| 1ನೇ ಅಬ್ಬಕ್ಕ | 12 | 16 | 28 |
| 1ನೇ ಅರುಂಧತಿ | 13 | 15 | 28 |
| 2ನೇ ಬಾಹುಬಲಿ | 13 | 15 | 28 |
| 2ನೇ ಬಂಕಿಮ | 14 | 14 | 28 |
| 2ನೇ ಸುಮಿತ್ರೆ | 14 | 14 | 28 |
| 2ನೇ ಭರತ | 13 | 15 | 28 |
| 2ನೇ ಜೀಜಾಬಾಯಿ | 13 | 14 | 27 |
| 3ನೇ ನೇತಾಜಿ | 21 | 16 | 37 |
| 3ನೇ ಶ್ರವಣ | 21 | 16 | 37 |
| 3ನೇ ಸುಧನ್ವ | 21 | 15 | 36 |
| 3ನೇ ಅಶೋಕ | 20 | 16 | 36 |
| 4ನೇ ತಾನಾಜಿ | 19 | 16 | 35 |
| 4ನೇ ಶಿವಾಜಿ | 16 | 16 | 32 |
| 4ನೇ ಅಭಿಮನ್ಯು | 17 | 15 | 32 |
| 4ನೇ ಉಪಮನ್ಯು | 17 | 16 | 33 |
| 5ನೇ ಕೇಶವ | 17 | 20 | 37 |
| 5ನೇ ಶ್ರೀಅರವಿಂದ | 16 | 20 | 36 |
| 5ನೇ ಅಹಲ್ಯ | 17 | 20 | 37 |
| 5ನೇ ಚಂದ್ರಗುಪ್ತ | 18 | 19 | 37 |
| 6ನೇ ತಿಲಕ | 23 | 20 | 43 |
| 6ನೇ ಕಬೀರ | 23 | 20 | 43 |
| 6ನೇ ಕಪಿಲ | 21 | 21 | 42 |
| 6ನೇ ಮಾಧವ | 24 | 20 | 44 |
| 7ನೇ ಶ್ರೀಹರ್ಷ | 24 | 17 | 41 |
| 7ನೇ ಪ್ರತಾಪ | 23 | 17 | 40 |
| 7ನೇ ಕನಕ | 23 | 18 | 41 |
| 7ನೇ ಶಂಕರ | 23 | 17 | 40 |
| **ಒಟ್ಟು** | **551** | **513** | **1064** |
| **ಪ್ರೌಢಶಾಲೆ** | | | |
| 8ನೇ ಏಕಲವ್ಯ | 22 | 22 | 44 |
| 8ನೇ ಕಣ್ಣಗಿ | 21 | 23 | 44 |
| 8ನೇ ನರೇಂದ್ರ | 20 | 21 | 41 |
| 8ನೇ ಪ್ರಹ್ಲಾದ | 32 | 25 | 57 |
| 8ನೇ ನಚಿಕೇತ | 32 | 26 | 58 |
| 9ನೇ ಭಾಸ್ಕರ | 31 | 20 | 51 |
| 9ನೇ ನಿವೇದಿತಾ | 29 | 22 | 51 |
| 9ನೇ ಪತಂಜಲಿ | 30 | 20 | 50 |
| 9ನೇ ಚೆನ್ನಮ್ಮ | 33 | 30 | 63 |
| 9ನೇ ದೇವಶಿಲ್ಪಿ | 31 | 30 | 61 |
| 9ನೇ ಓಬವ್ವ | 35 | 28 | 63 |
| 10ನೇ ಆಜಾದ್ | 26 | 26 | 52 |
| 10ನೇ ಭರತ | 28 | 26 | 54 |
| 10ನೇ ಚ್ಯವನ | 26 | 27 | 53 |
| 10ನೇ ದುರ್ಗಾವತಿ | 29 | 24 | 53 |
| 10ನೇ ವಿಶ್ವೇಶ್ವರಯ್ಯ | 28 | 26 | 54 |
| 10ನೇ ಭಾರ್ಗವ | 26 | 27 | 53 |
| **ಒಟ್ಟು** | **479** | **423** | **902** |
| **ಪದವಿಪೂರ್ವ ವಿದ್ಯಾಲಯ** | | | |
| ಪ್ರ. ಕಲಾ-ಗುರುಗೋವಿಂದ | **11** | **27** | **38** |
| ಪ್ರ.ವಾಣಿಜ್ಯ-ಎ -ವಿಕ್ರಮಾದಿತ್ಯ | **26** | **19** | **45** |
| ಪ್ರ.ವಾಣಿಜ್ಯ(ಬಿ)-ಶಾಲಿವಾಹನ | **20** | **20** | **40** |
| ಪ್ರ. ವಾಣಿಜ್ಯ(ಸಿ)-ಮಹಾವೀರ | **28** | **26** | **54** |
| ಪ್ರ.ವಾಣಿಜ್ಯ (ಡಿ)- ಪಾಣಿನಿ | **31** | **30** | **61** |
| ಪ್ರ.ವಿಜ್ಞಾನ (ಬಿ)-ಮೈತ್ರೇಯಿ | **18** | **13** | **31** |
| ಪ್ರ.ವಿಜ್ಞಾನ (ಎ)-ಭಗತ್‌ಸಿಂಗ್ | **16** | **16** | **32** |
| ದ್ವಿ.ಕಲಾ- ನಾನಾಸಾಹೇಬ | **17** | **15** | **32** |
| ದ್ವಿ.ವಾಣಿಜ್ಯ(ಎ)-ರಾಮತೀರ್ಥ | **26** | **25** | **51** |
| ದ್ವಿ.ವಾಣಿಜ್ಯ(ಬಿ)-ದಧೀಚಿ | **32** | **21** | **53** |
| ದ್ವಿ.ವಾಣಿಜ್ಯ(ಸಿ)-ಬಸವೇಶ್ವರ | **20** | **34** | **54** |
| ದ್ವಿ.ವಾಣಿಜ್ಯ(ಡಿ)-ಮೈಥಿಲಿ | **35** | **28** | **63** |
| ದ್ವಿ.ವಿಜ್ಞಾನ(ಎ)-ಅಗಸ್ತ್ಯ | **19** | **31** | **50** |
| ದ್ವಿ.ವಿಜ್ಞಾನ (ಬಿ)-ಯಾಜ್ಞವಲ್ಕ್ಯ | **23** | **18** | **41** |
| | **322** | **323** | **645** |

| **ಪದವಿ ವಿಭಾಗ** | | | |
|---|---|---|---|
| ಪ್ರ. ಬಿಕಾಂ ಎ - ಅರವಿಂದ | 45 | 11 | 56 |
| ಪ್ರ. ಬಿಕಾಂ ಬಿ -ಮಹಾವೀರ | 43 | 08 | 51 |
| ದ್ವಿ. ಬಿಕಾಂ ಎ-ಮಾಳವೀಯ | 33 | 12 | 45 |
| ದ್ವಿ.ಬಿಕಾಂ ಬಿ-ರಾಮಾನುಜ | 23 | 16 | 39 |
| ತೃ. ಬಿಕಾಂ ಎ-ಶ್ರದ್ಧಾನಂದ | 35 | 10 | 45 |
| ತೃ. ಬಿಕಾಂ ಬಿ-ದಯಾನಂದ | 28 | 19 | 47 |
| ಪ್ರ. ಬಿ.ಎ - ಹೊಯ್ಸಳ | 12 | 01 | 13 |
| ದ್ವಿ. ಬಿ.ಎ - ಚಾಲುಕ್ಯ | 19 | 09 | 28 |
| ತೃ. ಬಿ.ಎ - ಕದಂಬ | 31 | 05 | 36 |
| | **269** | **91** | **360** |

## ಸಿಬ್ಬಂದಿವರ್ಗ

| | | | |
|---|---|---|---|
| **ಶಿಶುಮಂದಿರ** | | | |
| ಶಿಕ್ಷಕಿಯರು | **0** | **13** | **13** |
| ಸಹಾಯಕಿಯರು | **0** | **8** | **8** |
| **ಪ್ರಾಥಮಿಕ ಶಾಲೆ** | | | |
| ಬೋಧಕರು | **03** | **39** | **42** |
| ಬೋಧಕೇತರರು | **01** | **02** | **03** |
| **ಪ್ರೌಢಶಾಲೆ** | | | |
| ಬೋಧಕರು | **12** | **18** | **30** |
| ಬೋಧಕೇತರರು | **04** | **02** | **06** |
| **ಪದವಿಪೂರ್ವ** | | | |
| ಬೋಧಕರು | **07** | **14** | **28** |
| ಬೋಧಕೇತರರು | **03** | **03** | **06** |
| **ಪದವಿ** | | | |
| ಬೋಧಕರು | **11** | **8** | **19** |
| ಬೋಧಕೇತರರು | **3** | **3** | **6** |
| **ವಾಹನ ಚಾಲಕರು** | | | |
| ಚಾಲಕರು | **16** | **0** | **16** |
| ನಿರ್ವಾಹಕರು | **02** | **0** | **02** |
| **ವಸತಿ ನಿಲಯ** | | | |
| ವಸತಿ ಪಾಲಕರು | **4** | **2** | **6** |
| ಅಡುಗೆ ತಯಾರಕರು | **3** | **3** | **6** |
| **ವಿದ್ಯಾಕೇಂದ್ರ ಕಚೇರಿ** | | | |
| ಪ್ರಬಂಧಕ್ | **01** | **0** | **01** |
| ಸಾ.ಸಂಪರ್ಕ ಅಧಿಕಾರಿ | **01** | **0** | **01** |
| ಲೆಕ್ಕಾಧಿಕಾರಿ | **01** | **0** | **01** |
| ಇತರ | **01** | **0** | **01** |

## ಪ್ರೌಢ ಶಾಲೆ



ಪ್ರೌಢಶಾಲ ಗುರುವಂದನಾ ಕಾರ್ಯಕ್ರಮದಲ್ಲಿ
ಹಿರಿಯ ನಿವೃತ್ತ ಶಿಕ್ಷಕರಿಗೆ ಸನ್ಮಾನ



ವಿದ್ಯಾಭಾರತಿ ಜಿಲ್ಲಾ ಮಟ್ಟದ ಖೋ-ಖೋ
ಪಂದ್ಯಾಟದ ಉದ್ಘಾಟನೆ -ಶ್ರೀ ಸತೀಶ್ ಶಿವಗಿರಿ

## ಪದವಿ ಪೂರ್ವ



ದ್ವಿತೀಯ ವಿಜ್ಞಾನ "ಎ" ವಿಭಾಗದ
ಜೂನ್ ತಿಂಗಳ ಮಾಸಿಕ ಭಜನೆ



ವಿದ್ಯಾರ್ಥಿ ಸಂಘ ಉದ್ಘಾಟನೆ
ಶ್ರೀ ಜಗದೀಶ ಅಧಿಕಾರಿಯವರಿಂದ




ಪ್ರತಿಭಾರಾಮ ಸಾಹಿತ್ಯ ಸಂಘ ಉದ್ಘಾಟನೆ -
ಶ್ರೀಮತಿ ಭವ್ಯ ವಿವೇಕಾನಂದ ಕಾಲೇಜು



ಭಾಮತಿ ವಾಣಿಜ್ಯ ಸಂಘದ ಉದ್ಘಾಟನೆ,
ವಿಶೇಷ ಉಪನ್ಯಾಸ ಶ್ರೀ ಗಣೇಶ ರಾವ್ (ಸಿ.ಎ)

## ಪದವಿ



ವಿದ್ಯಾರ್ಥಿ ಸಂಘ ಉದ್ಘಾಟನೆ -
ಲೇಖಕ, ಚಿಂತಕ ಡಾ. ಪ್ರಭಾಕರ ಶಿಶಿಲ



ಪ್ರಭಾಸ ಮಾನವಿಕ ಸಂಘ ಉದ್ಘಾಟನೆ, -
ಶ್ರೀ ಚಂದ್ರಶೇಖರ



ಪ.ಪೂ ವಿಭಾಗದ ವಿಜ್ಞಾನ ಸಂಘ ಉದ್ಘಾಟನೆ




ಗುರುವಂದನಾ - ಶ್ರೀ ಜಯಂತನಾಯಕ್ ಕುಂಡೇರಿ,
ನಿವೃತ್ತ ಶಿಕ್ಷಕಿ ಶ್ರೀಮತಿ ಜಯಲಕ್ಷ್ಮಿ ನಂದೋಡಿ




ಶಿರಸಿಯ ಈಶ್ವರದಾಸ ಕೊಪ್ಪೆಸರ ಇವರ
ಭಕ್ತಪ್ರಹ್ಲಾದ ಎಂಬ ಹರಿಕಥೆ ಕಾರ್ಯಕ್ರಮ




NSS ಉದ್ಘಾಟನೆ - ಶ್ರೀರಾಮಕುಂಜೇಶ್ವರ
ಕಾಲೇಜಿನ ಉಪನ್ಯಾಸಕ ಶ್ರೀ ಕೃಷ್ಣಮೂರ್ತಿ



ಮಾಸಿಕಭಜನೆ ಮತ್ತು ಸಾಮೂಹಿಕ ಹುಟ್ಟುಹಬ್ಬ




ಕಾರ್ಗಿಲ್ ವಿಜಯದಿನ, ಸಾಹಸಿಗರ ಸಂಘ
ಉದ್ಘಾಟನೆ - ಶ್ರೀಮತಿ ಆಶಾ ಪ್ರಸಾದ್ ರೈ




ಕನ್ನಡ-ಸಾಹಿತ್ಯ ಸಂಘ ಉದ್ಘಾಟನೆ, ಉಪನ್ಯಾಸ
ಸಪ್ತಾಹ - ಶ್ರೀಮತಿ ಲಕ್ಷ್ಮೀ ರಘುರಾಜ್



ಟೀಮ್ ವಿವೇಕ್ ಪುಸ್ತಕ ಪ್ರದರ್ಶನ ಮತ್ತು ಮಾರಾಟ 18–07–2017




ಪ್ರಭೋದ ವಾಣಿಜ್ಯ ಸಂಘದ ವತಿಯಿಂದ ಪಾಸ್‌ಪೋರ್ಟ್, ಪಾನ್‌ಕಾರ್ಡ್ ಅಭಿಯಾನ



ರಾಷ್ಟ್ರೀಯ ಸೇವಾ ಯೋಜನೆಯ ವತಿಯಿಂದ ಸುಧೆಕ್ಕಾರಿನಲ್ಲಿ ಶ್ರಮದಾನ



ಪ್ರದೀಪ್ತ ಸಾಂಸ್ಕೃತಿಕ ಸಂಘದ ಉದ್ಘಾಟನೆ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮ



ವಿದ್ಯಾಭಾರತಿ ದ.ಕ ಜಿಲ್ಲಾ ಘಟಕದ ಕಾಲೇಜು ವಿಭಾಗದ ಶೈಕ್ಷಣಿಕ ಸಹಮಿಲನ ಜುಲೈ 15ರಂದು ಶ್ರೀರಾಮ ಪ.ಪೂ ವಿಭಾಗದಲ್ಲಿ ನಡೆಯಿತು. ವಿಧಾನಪರಿಷತ್ ಸದಸ್ಯರಾದ ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಉದ್ಘಾಟಿಸಿದರು. ಬಳಿಕ ಚೀನಾ ಒಂದು ಕರಾಳ ಮುಖ ವಿಷಯದ ಬಗೆಗೆ ಶ್ರೀ ಪ್ರದೀಪ್ ಮೈಸೂರು ಉಪನ್ಯಾಸ ನಡೆಸಿಕೊಟ್ಟರು.



ಸಮಾವೇಶದಲ್ಲಿ ಭಾಗವಹಿಸಿದ್ದ ದ.ಕ ಜಿಲ್ಲೆಯ ವಿದ್ಯಾಭಾರತಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ ಸದಸ್ಯರು ಹಾಗೂ ವಿವಿಧ ಕಾಲೇಜುಗಳ ಬೋಧಕ, ಬೋಧಕೇತರ ಸಿಬ್ಬಂದಿಯವರು ಒಟ್ಟು 580 ಪ್ರತಿನಿಧಿಗಳು ದಿನಪೂರ್ತಿ ನಡೆದ ಸಹಮಿಲನ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

Postal Regn No. PTR/135/2016-18 Licensed to Post without pre-payment License No: SK/WPP/PTR/177/2016-18

ಸರಯೂ

KARKAN/2014/62363
Posted at Kalladka P.O. on 10th and 15th of Every month

Vol. : 4 Issue : 3 Rs. 10/-

SRI RAMA VIDYAKENDRA TRUST (R.) Hanuman Nagar, Kalladka, Bantwal Tq., Dakshina Kannada, Karnataka 574 222
Ph.: 08255-275273 / 275183 / 275073 / 275693 / 279673 / 200085 / 279479
Website : www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 08255-275 273. Printed at Anagha Digital Square, Kaikamba, B.C. Road - 574 219, Bantwal Tq., Dakshina Kannada, Karnataka. Registration No. : KARKAN/2014/62363